ಇದು ಈಗಾಗಲೇ ಬಹುತೇಕವಾಗಿ ದೊಡ್ಡ ದೊಡ್ಡ ನಗರಗಳ ಸುತ್ತಲೂ ಕೆಲವರು ಕೃಷಿ ಭೂಮಿಯನ್ನು ಸರಕಾರದ ನಿಯಮಗಳಿಗೆ ವಿರುದ್ಧವಾಗಿ ಕೃಷಿಯೇತರ ಉಪಯೋಗಕ್ಕೆ ಅವಶ್ಯಕತೆ ಇರತಕ್ಕಂತಹ ಹಣವನ್ನು ತುಂಬಿದೆ. ಪರವಾನಿಗಿ ಪಡೆದುಕೊಳ್ಳದೆ ಇಂತಹ ಕಟ್ಟಡಗಳನ್ನು ಕಟ್ಟಿದ್ದಾರೆ. ಹಿಂದೆ ಕಟ್ಟಿದಂತಹವರಿಗೆ ರೆಗ್ಯುಲರೈಸ್ ಮಾಡಬೇಕು. ಮುಂದೆ ಹಾಗೆ ಕಟ್ಟಲು ಬಿಡಬಾರದು ಎಂಬ ದೃಷ್ಟಿಯಿಂದ ದಂಡವನ್ನು ವಿಧಿಸಲಾಗಿದೆ. ಮುಂದೆ ಈ ರೀತಿಯಲ್ಲಿ ಯಾರಾದರೂ ಮಾಡಿದರೆ ದಂಡ ಮತ್ತು ಶಿಕ್ಷೆ ಎರಡನ್ನೂ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಿದ್ದೇವೆ. ಇನ್ನು ರೈತರು ತಮ್ಮ ಜಮೀನಿನಲ್ಲಿ ಮನೆ ಕಟ್ಟುವುದರ ಬಗ್ಗೆ ದಂಡ ಕೊಡುವ ಪ್ರಶ್ನೆ ಇಲ್ಲ. ಅವರಿಗೆ ಫಾರ್ಮ್ ಹೌಸನ್ನು ಕಟ್ಟಿಕೊಳ್ಳಲಿಕ್ಕೆ ಅವಕಾಶ ಇದೆ. ಅವರಿಗೆ ದಂಡ ವಿಧಿಸಲಿಕ್ಕೆ ನಿಯಮ ಇಲ್ಲ. ಅಂತಹ ಪ್ರಕರಣಗಳು ಒಂದು ವೇಳೆ ಇದ್ದಲ್ಲಿ ಅದನ್ನು ನನ್ನ ಗಮನಕ್ಕೆ ತಂದಲ್ಲಿ ಸರಿಪಡಿಸುತ್ತೇನೆ.

XII. ಉಳ್ಳಾಲ ಕ್ಷೇತ್ರದಲ್ಲಿ ವೋಲ್ಟೇಜ್ ಕಡಿಮೆಯಾಗಿ ವಿದ್ಯುತ್ ಕೊರತೆಯಾಗಿರುವುದು

ಶ್ರೀ ಡಿ. ಎಂ. ಇದಿನಬ್ಬ.—ಉಳ್ಳಾಲ ಕ್ಷೇತ್ರದಲ್ಲಿ ವಿದ್ಯುತ್ ಕೊರತೆ ವೋಲ್ಟೇಜು ಕಡಿಮೆಯಾಗಿ ಗ್ರಾಹಕರಿಗೆ ಆಗಾಗ ತೊಂದರೆ ಉದ್ದಗಡ್ತಿರುವ ವಿಚಾರ ತಿಳಿದಿರುವುದೇ ಆಗಿದೆ. ಈ ತೊಂದರೆ ತಪ್ಪಿಸಲು ಕೊಣಾಜೆಯಲ್ಲಿ ಸ್ಟೇಷನ್ ಸ್ಟಾಫ್ ಕಡ್ಡಾಯ ಮಾಡಬೇಕು. ಸ್ಟೇಷನ್ ಸ್ಟಾಫ್ ಇಟ್ಟು, ನಾಲ್ಕು ಲೈನುಗಳ ಗಮನ ಸರಿಯಾಗಿ ಹರಿಸಿದರೆ ಉಳ್ಳಾಲ ಕ್ಷೇತ್ರದ ವಿದ್ಯುತ್ ತೊಂದರೆ ನೀಗುವಂತಾದೀತು. ಆದಕಾರಣ ಕೊಣಾಜೆ ಸ್ಟೇಶನ್‌ನಿನಲ್ಲಿ ಖಾಯಂ ಸ್ಟಾಫ್ ಇಟ್ಟು ಈ ಭಾಗದ ಜನರಿಗಿರುವ ವಿದ್ಯುತ್ ತೊಂದರೆಯನ್ನು ಸರಿಪಡಿಸುವುದು ಆಗತ್ಯವಾಗಿರುತ್ತದೆ. ಈ ಕುರಿತು ವಿದ್ಯುತ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಸಚಿವರು ಸದನದಲ್ಲಿ ಇಲ್ಲ. ಅವರಿಂದ ಮಾನ್ಯ ಸದಸ್ಯರಿಗೆ ಸೂಕ್ತವಾದ ಉತ್ತರವನ್ನು ತರಿಸಿಕೊಡಲು ಏರ್ಪಾಡು ಮಾಡುತ್ತೇನೆ.

XIII. ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ ಹುದ್ದೆಗೆ ಬೇಕಾದ ಅರ್ಜಿಗಳು ದೊರೆಯದಿರುವುದು

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ ಹಾಗೂ ಅಗ್ರಿಕಲ್ಚರಲ್ ಅಸಿಸ್ಟೆಂಟ್‌ರುಗಳು ನೇಮಕಾತಿ ಬಗ್ಗೆ ಅರ್ಜಿಗಳನ್ನು ಕರೆಯಲಾಗಿದ್ದು ೨೧ನೇ ದಿನಾಂಕ ಕೊನೆಯ ದಿನವಾಗಿರುತ್ತದೆ. ಆದರೆ ಅರ್ಜಿ ಫಾರಂಗಳು ದೊರೆಯುತ್ತಿಲ್ಲ. ಕಡೆಯ ದಿನಾಂಕವನ್ನು ಮುಂದುವರಿಸಿ ಕೂಡಲೇ ಅರ್ಜಿ ಫಾರಂಗಳು ದೊರಕುವಂತೆ ಶೀಘ್ರಕ್ರಮವನ್ನು ಕೈಕೊಳ್ಳಬೇಕೆಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಗಮನಕ್ಕೆ ತಂದ ವಿಚಾರದಲ್ಲಿ ದಿನಾಂಕವನ್ನು ಮುಂದುವರಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆ.

XIV. ಕೃಷಿ ಸಹಾಯಕ ಹುದ್ದೆಗಳಿಗೆ ಅರ್ಜಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕಳಿಸುವುದು ಮತ್ತು ಕೊನೆಯ ದಿನಾಂಕವನ್ನು ಮುಂದೂಡುವುದು

ಶ್ರೀ ವಸಂತ ವಿ. ಸಾಲ್ಯಾನ್.—ಕರ್ನಾಟಕ ಸರಕಾರವು ಕೃಷಿ ಇಲಾಖೆಗೆ ೭೦೦ ಕೃಷಿ ಸಹಾಯಕ ಹುದ್ದೆಗಳಿಗೆ ಫಾರಂ ನಂ. ೧೧ರಲ್ಲಿ ಅರ್ಜಿ ಆಹ್ವಾನಿಸಿದ್ದಾರೆ. ಆದರೆ ಈ ಅರ್ಜಿ ನಮೂನೆ ಇನ್ನೂ ಎಂದರೆ ನಿನ್ನೆವರೆಗೆ ದಕ್ಷಿಣ ಕನ್ನಡವನ್ನು ಇನ್ನೂ ತಲುಪಿಲ್ಲ. ಅರ್ಜಿ ಸಲ್ಲಿಸಲು ಕಡೇ ದಿನಾಂಕ ೨೦-೩-೧೯೮೬ ರಂದು ಆ ದಿನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸದಂತೆ ಇದು ಪೂರ್ವ